ಜೋಡಿ ರಂಗನಾಥಪುರದಲ್ಲಿ ಗುಡಿಸಲು ನಿವಾಸಿಗಳಿಗೆ ನಿವೇಶನಗಳನ್ನು ಗೊತ್ತುಪಡಿಸುವುದು

೭೧೭ ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ) — ಕಾನೂನು ಹಾಗೂ ನಗರಾಡಳಿತ ಮಂತ್ರಿಗಳು ಈ ವಿಷಯುಗಳನ್ನು ದಯಯಿಟ್ಟು ತಿಳಿಸುವರೆ. —

(ಅ) ಜೋಡಿ ರಂಗನಾಥಪುರ ಎಂಬ ಹೆಸರಿನ ಜೋಡಿ ಗ್ರಾಮದ ಸರ್ವೆ ನಂಬರ್ ೯ ರಲ್ಲಿ ಮಂಜೂರಾಯಿ ಸರ್ವೆ ನಂ. ೧೦ರಲ್ಲಿ ಹಾಗೂ ಜಕ್ಕಸಂದ್ರದ ಶ್ಯಾನುಭೋಗರ ಇನಾಮತಿ ಜಮೀನ್ ಸರ್ವೆ ನಂ. ೧೪ ರಲ್ಲಿ ೭೨ ಗುಡಿಸಲು ವಾಸಿಗಳು ಖಾಯಂ ಆಗಿ ರೈಲ್ವೆನಿಲ್ದಾಣದಿಂದ ವಾಸ ಮಾಡುತ್ತಾ, ಕೂಲಿಕಾರರಾಗಿ ಜೀವನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

(ಆ) ಬೆಂಗಳೂರು ಜಿಲ್ಲಾಧಿಕಾರಿಗಳು ಸದರಿ ಗುಡಿಸಲುವಾಸಿಗಳಿಗೆ ನಿವೇಶನಗಳನ್ನು ವಿಂಗಡಿಸಿ ಕೊಡಲು ಅಂದಿನ ಬೆಂಗಳೂರು ಸಿಟಿ ಮುನಿಸಿಪಲ್ ಕೌನ್ಸಿಲ್‌ಗೆ ೧೯೫೭ರಲ್ಲಿ ಪತ್ರ ಬರೆದಿದ್ದುದು ನಿಜವೆ ;

(ಇ) ಈ ಪತ್ರದಂತೆ ಬೆಂಗಳೂರು ಕಾರ್ಪೊರೇಷನ್‌ನವರು ತಾರೀಖು ೩-೧೧-೧೯೬೬ ರಲ್ಲಿ ನಡೆದ ಕಾರ್ಪೊರೇಷನ್ ಸಭೆಯಲ್ಲಿ ಸದರಿ ಗುಡಿಸಲುವಾಸಿಗಳಿಗೆ ನಿವೇಶನ ಒದಗಿಸಲು ಸೂಕ್ತ ನಿರ್ಣಯ ಕೈಗೊಂಡಿದ್ದು ನಿಜವೆ ;

ಶ್ರೀ ಡಿ. ಕೆ. ನಾಯ್ಕರ್.—(ಕಾನೂನು ಹಾಗೂ ನಗರಾಡಳಿತ ಮಂತ್ರಿಗಳು)

(ಅ) ಬಂದಿದೆ.

(ಆ) ನಿಜ.

(ಇ) ನಿಜ.

ಶ್ರೀ ಎಂ ಹೆಚ್. ಜಯಪ್ರಕಾಶ್ ನಾರಾಯಣ್-—ಸ್ವಾಮಿ, ಜೋಡಿ ರಂಗನಾಥಪುರ ಎನ್ನೆ ತಕ್ಕದ್ದು, ಶೇಷಾದ್ರಿಪುರ ನಂಜಪ್ಪ ಬ್ಲಾಕ್‌ನಲ್ಲಿ ಬೆಂಗಳೂರು ಸಿಟಿಯ ಮಧ್ಯದಲ್ಲಿ ಇದೆ. ನಮ್ಮಾರು ಳು ವರ್ಷಗಳ ಹಿಂದೆ, ಪ್ರೊಫೆಸರ್ ಬಿ. ಎಂ. ಶ್ರೀಕಂಠಯ್ಯನವರು ಲಿಟರರಿ ಕ್ಲಾಸ್ ಮಾಡುತ್ತಿದ್ದರು, ಅಲ್ಲಿ ೭೨ ಜನ ಗುಡಿಸಲುಗಳು ಇದ್ದವು, ಈಗ ೧೫೦ ಆಗಿರಬಹುದು. ನನ್ನ ಎಲ್ಲಾ ಪ್ರಶ್ನೆಗಳಿಗೂ ನಿಜ ಎಂದು ಬಹಳ ಉತ್ತಮವಾಗಿ ಉತ್ತರ ಕೊಟ್ಟಿದ್ದೀರಿ, ಆದರೆ ಇದುವರೆವಿಗೂ ಆ ನತದೃಷ್ಟರಿಗೆ ಯಾವದೇ ರೀತಿಯ ವ್ಯವಸ್ಥೆ ಮಾಡಿಲ್ಲ; ತಾವು ಸ್ಥಳ ಪರೀಕ್ಷೆ ಮಾಡಿ ಸೈಟುಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

†ಶ್ರೀ ಡಿ.ಕೆ. ನಾಯ್ಕರ್.—ಮಾನ್ಯ ಸದಸ್ಯರ ಮೂರು ಪ್ರಶ್ನೆಗಳಿಗೂ ಉತ್ತರ ಕೊಟ್ಟಿದೆ; ಈಗ ಅಲ್ಲಿ ಏನಾಗಿದೆ ಎಂದರೆ, ಅಲ್ಲಿ ೨೦೦ ಗುಡಿಸಲುಗಳು ಇವೆ, ಅಲ್ಲಿ ವಾಸ ಇರತಕ್ಕ ಜನರಿಗೆ ಸೈಟ್ ಕೊಡ ಬೇಕೆಂದು ಡೆಪ್ಯೂಟಿ ಕಮೀಷನರ್‌ರವರಿಗೆ ಪತ್ರ ಬರೆದಿದ್ದು ನಿಜ; ಆ ಪತ್ರದ ಮೇಲೆ ಕಾರ್ಪೊರೇಷನ್ ಸೈಟು ಕೊಡುವ ಬಗ್ಗೆ ನಿರ್ಣಯ ತೆಗೆದುಕೊಂಡಿದ್ದು ನಿಜ; ಆದರೆ ಅಲ್ಲಿ ೩೨ ಜನರಿಗೆ ಮಾತ್ರ ಸೈಟ್ ಕೊಡಲಿಕ್ಕೆ ಆಗಿ; ಉಳಿದ ಜನರಿಗೆ ಟ್ರಸ್ಟ್‌ಬೋರ್ಡಿನಿಂದ ಕೊಡಿಸುವ ತೀರ್ಮಾನ ಮಾಡಿದ್ದೇವೆ.

ಆದರೆ ಸಿ.ಐ.ಟಿ.ಬಿ.ಯವರು ಕೊಡುವುದರಲ್ಲಿ ಆ ಬಗ್ಗೆ ಸರಿಯಾದ ಫಲಕಾರಿಯಾಗಲಿಲ್ಲ ಈಗ ಈ ಸ್ಲಮ್ಸ್ ಕ್ಲಿಯರೆನ್ಸ್‌ಗಾಗಿ ೧ ಲಕ್ಷ ೬೮ ಸಾವಿರ ರೂಪಾಯಿ ಹಣವನ್ನು ತೆಗೆದಿಟ್ಟಿದ್ದೇವೆ. ಆದುದರಿಂದ ಈಗ ನಾನೇ ಸ್ವತಃ ಹೋಗಿ ಸ್ಥಳ ಪರಿಶೀಲನೆ ಮಾಡಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳತಕ್ಕದು ಸೂಕ್ತ ಎಂದು ನಾನು ತಿಳಿದುಕೊಂಡಿದ್ದೇನೆ.

Prescribed width of P. W. D. and other roads

118. SRI B. G. BANAKAR (Hirekerur).- Will the Minister for Public Works be pleased to state:-

(a) the required width of PWD roads prescribed for State Highways, Major District Roads, other District Roads and Village roads in the limits of local authority and beyond local authority in the State where ribbon developments is forbiden;

(*b*) the fate of the road side buildings constructed within the prescribed width before the recognition of PWD Roads and local authority?

(*c*) the action the Government intend to take in this matter?

SRI H. M. CHANNABASAPPA (Minister for Public Works).—

(*a*) In Government Order No PWD 43 CRM 75, dated 18th February 1976, the following limits of all PWD Road widths are prescribed as per I. R. C. standards.

Class of Road	Open area and Agricultural Country				Urban and Industrial area		
	Land Width		Building line (Overall Width)	Control line Overall Width	Road Land Width		Building line set-back beyond the road margin
	Normal	Range			Normal	Range	
1	2	3	4	5	6	7	8
State Highways	100′	100′-200′	200′	440′	80′	80′-100′	10′-20′
Major District Road	80′	80′-100′	160′	300′	40′	40′-60′	10′
Other District Road	40′	40′-80′	80′	120′	30′	30′-50′	
Village Road	40′	40′-60′	80′	100′	30′	30′-50′	

(*b*) and (*c*) The Karnataka Highways Act, 1964 provides that in respect of roads declared as Highways under the Act, the State Government by Notification, may fix the Highway Boundary line, the Building line and the Control line

As per this Act, if the State Government requires any land for the purpose of Highway, the State Government by Notification acquires such land.

Action is now being taken to remove all encroachment and unauthorised construction on Government lands within the road boundaries in the State, as per guidelines approved by Government.

ಶ್ರೀ ಬಿ.ಜಿ. ಬಣಕಾರ್.—ಇದರಲ್ಲಿ (ಅ) ಪ್ರಶ್ನೆಗೆ ಉತ್ತರ ಏನೂ ಹೇಳಿಲ್ಲ. ಪಿ.ಡಬ್ಲ್ಯೂ.ಡಿ. ಯವರು ಈ ಜಾಗವನ್ನು ತೆಗೆದುಕೊಳ್ಳುವ ಮೊದಲು ಹಿಂದೆ ಕೆಲವು ಕಟ್ಟಡಗಳನ್ನು ಕಟ್ಟಿದ್ದರು. ಈ ರಸ್ತೆಯನ್ನು ನಿರ್ಮಿಸಲು ಅವರಿಂದ ಏನು ಜಾಗವನ್ನು ತೆಗೆದುಕೊಂಡಿದ್ದಾರೋ ಅದಕ್ಕೆ ಏನಾದರೂ ಪರಿಹಾರ ಕೊಡುತ್ತಾರೆಯೇ? ಅಥವಾ ಆ ಜಾಗದಲ್ಲಿ ಏನೂ ಕಟ್ಟಡವನ್ನು ಕಟ್ಟದೇ ಹಾಗೆಯೇ ಬಿಟ್ಟುಬಿಡುತ್ತೀರಾ?

ಶ್ರೀ ಹೆಚ್ ಎಂ. ಬನ್ನಬಸಪ್ಪ.—ಸರ್ಕಾರೀ ಜಮೀನಿನಲ್ಲಿ ಅವರು ಅಕ್ರಮಣ ಮಾಡಿಕೊಂಡಿರ ತಕ್ಕಂಥಾದ್ದನ್ನು ಹಿಂದಕ್ಕೆ ತೆಗೆದುಕೊಳ್ಳುವ ಕಾರ್ಯಕ್ರಮ ಇರುವುದರಿಂದ ಯಾರಿಗೂ ಕೂಡ ಪರಿಹಾರವನ್ನು ಕೊಡತಕ್ಕಂಥಾ ಪ್ರಮೇಯ ಬರುವುದಿಲ್ಲ.

ಶ್ರೀ ಬಿ.ಜಿ. ಬಣಕಾರ್.—ಆ ಜಾಗದಲ್ಲಿ ಮೊದಲೇ ಕಟ್ಟಡಗಳನ್ನು ಏನು ಕಟ್ಟಿದರೋ ಆವಾಗಲೇ ಇದು ಪಿ.ಡಬ್ಲ್ಯೂ.ಡಿ. ರಸ್ತೆ ಎಂದು ತೀರ್ಮಾನ ತೆಗೆದುಕೊಂಡು ನೋಟಿಫಿಕೇಷನ್ ಮಾಡಲಿಲ್ಲ. ಈಗ ಆ ಜಾಗದಲ್ಲಿ ಕಟ್ಟಡ ಏನಾದರೂ ಕಟ್ಟುತ್ತೀರಾ?

ಶ್ರೀ ಹೆಚ್.ಎಂ. ಚೆನ್ನಬಸಪ್ಪ.—ಕಟ್ಟಡ ನಿರ್ಮಾಣ ಮಾತಬೇಕಾದರೆ ಅವರ ಜಾಗದಲ್ಲಿ ಮಾಡುವುದಿಲ್ಲ, ಸರ್ಕಾರೀ ಜಾಗದಲ್ಲಿ ಮಾಡುತ್ತೇವೆ,

ಶ್ರೀ ಬಿ ಜಿ. ಬಣಕಾರ್.—ಸ್ವಾಮಿ ಅಲ್ಲಿ ಕಟ್ಟಡ ಆಯಿತು ಎಂದರೆ ದೊಡ್ಡ ರಸ್ತೆ ಆವಶ್ಯಕವಾಗಿ ಬೇಕಾಗುತ್ತದೆ ಏಕಕ್ಕೆಂದರೆ ಆ ರಸ್ತೆಯಲ್ಲಿ ಎದುರುಬದರೊಂದಿಗೆ ಬಸ್ಸುಗಳು ಓಡಾಡುವ ಸಂದರ್ಭ ಬರುತ್ತದೆ. ಆದ್ದರಿಂದ ಅಂಥಾ ಸಂದರ್ಭದಲ್ಲಿ ಏನು ಮಾಡುತ್ತೀರಿ?

ಶ್ರೀ ಹೆಚ್.ಎಂ. ಚನ್ನಬಸಪ್ಪ —ಅನಿವಾರ್ಯವಾದ ಸಂದರ್ಭ ಬಂದರೆ ಇನ್ನೊಬ್ಬರ ಜಮೀನನ್ನು ತೆಗೆದುಕೊಂಡು ಅವರ ಜಮೀನನ್ನು ಅಕ್ವೈರ್ ಮಾಡಿಕೊಳ್ಳುತ್ತೇವೆ.

Consti ution of Co-ordination Committees

469 SRI BAPUGOWDA (Shahapur)— Will the Chief Minister be pleased to state —

(*a*) whether the District and Taluk Level Co-ordination Committees have been formed ;

(*b*) if so, the names of the Non-official Members of Gulbarga District and its Talukas who have been nominated to serve on these Committees ?

SRI D. DEVARAJ URS (Chief Minister) —

(*a*) Yes,

(*b*) Nomination of Non-official Members to District Committees including Gulbarga District is under consideration of Government.

As regards names of Non-official Members nominated to each of the Taluk Co-ordination Committees in Gulbarga District *vide* list appended

Names of 3 Non-Official Members nominated to each of the Taluk Co-ordination Committees in Gulbarga District.